**ವಾತಾವರಣ**
ಗರಿಷ್ಠ 27, ಕನಿಷ್ಠ 21
ಉಷ್ಣಾಂಶವಿದ್ದು, ಮೋಡ ಕವಿದ ವಾತಾವರಣ ಇರಲಿದೆ.

## ಉಚಿತ ಯೋಗ ಶಿಬಿರ 21ರಿಂದ

**ಬೆಂಗಳೂರು:** ಭೂಮಿ ನೆಸ್ಟ್ ಟ್ರಸ್ಟ್ ವತಿಯಿಂದ ಜೂ. 21ರಿಂದ 24ರವರೆಗೆ ದೀಪಾಂಜಲಿ ನಗರದ ಟ್ರಸ್ಟ್‌ನ ಯೋಗ ಮತ್ತು ಸಾಂಸ್ಕೃತಿಕ ಕೇಂದ್ರದಲ್ಲಿ ಉಚಿತ ಯೋಗ ಶಿಬಿರ ಮತ್ತು ತರಬೇತಿ ಕಾರ್ಯಕ್ರಮ ಆಯೋಜಿಸಿದೆ. ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಲ್ಲಿ ಉತ್ತಮ ಆರೋಗ್ಯ ಮತ್ತು ವ್ಯಕ್ತಿತ್ವ ವಿಕಾಸದ ಉದ್ದೇಶಕ್ಕಾಗಿ ಟ್ರಸ್ಟ್ ಈ ಶಿಬಿರ ಹಮ್ಮಿಕೊಂಡಿದೆ. ಹೆಚ್ಚಿನ ಮಾಹಿತಿಗಾಗಿ 9449443957 ಸಂಪರ್ಕಿಸಿ.

## ಹಣೆ ಬರಹ
ಒಳ್ಳೆಯದೇ ಬರೆದಿರಲಿ

ಉದಯ 5.52 | ಅಸ್ತ 6.41

**ಬುಧವಾರ** 13.06.2018

ಶ್ರೀವಿಲಂಬಿ, ಉತ್ತರಾಯಣ, ಗ್ರೀಷ್ಮಋತು, ಅಧಿಕ ಜೇಷ್ಠಮಾಸ, ಕೃಷ್ಣಪಕ್ಷ, ಅಮಾವಾಸ್ಯೆ, ಬುಧವಾರ, ನಿತ್ಯ ನಕ್ಷತ್ರ-ರೋಹಿಣಿ, ಯೋಗ-ಧೃತಿ, ಕರಣ-ಚತುಷ್ಪಾತ್.

| ರಾಹುಕಾಲ | ಗುಳಿಕಕಾಲ | ಯಮಗಂಡಕಾಲ |
|---|---|---|
| 12.00-1.30 | 10.30-12.00 | 7.30-9.00 |

ವಿ.ಡಿ.ಭಟ್ ಕರಸುಳ್ಳಿ (ಶಿರಸಿ) ದೂ: 9449360806

**ಮೇಷ**: ದೂರದ ಪ್ರಯಾಣದ ಬಗ್ಗೆ ಆಸಕ್ತಿ ಮೂಡಲಿದೆ. ಕುಟುಂಬದ ವರ್ಗದವರ ಜತೆಗೂಡಿ ಸಂತೋಷ ಕೂಟದಲ್ಲಿ ಭಾಗವಹಿಸುವ ಯೋಗ ಈ ದಿನ ದೊರಕಲಿದೆ.

**ವೃಷಭ**: ಕಷ್ಟವನ್ನು ಮೆಟ್ಟಿ ನಿಲ್ಲುವ ಅಷ್ಟೇ ಧೈರ್ಯವನ್ನು ಹೊಂದುವ ಪ್ರವೃತ್ತಿ ಇಂದು ನಿಮಗೆ ಬರಲಿದೆ. ಕಾರ್ಯದಲ್ಲಿ ಯಶಸ್ಸನ್ನು ಕಾಣಲಿದ್ದೀರಿ. ಕೌಟುಂಬಿಕ ಕ್ಷೇತ್ರದಲ್ಲಿ ಪ್ರಗತಿಯೂ ದೊರಕಲಿದೆ.

**ಮಿಥುನ**: ಬಂಧು-ಬಾಂಧವರಲ್ಲಿ ಕುಶಲೋಪರಿ ಸಮಾಚಾರವೊಂದೆ ಸಾಕು. ವ್ಯವಹಾರಿಕ ಸಂಬಂಧ ಇಂದು ಬೇಡ. ನಷ್ಟ-ಮನಸ್ತಾಪಕ್ಕೂ ಕಾರಣವಾಗಿ ಬಿಡುವ ಸಂಭವ ಹೆಚ್ಚಿದೆ ಎಚ್ಚರ.

**ಕಟಕ**: ನೆರೆಯವರಲ್ಲಿ ಸಂಬಂಧ ವೃದ್ಧಿಯಾಗಿ ವಿನೋದ ಪ್ರಸಂಗದಲ್ಲಿ ಭಾಗವಹಿಸುವ ಸಂದರ್ಭ ದೊರಕಲಿದೆ. ಸಂಘಟನೆಯ ಬಲವು ವೃದ್ಧಿಯಾಗಿ ಎಲ್ಲರ ಗೌರವಕ್ಕೆ ಪಾತ್ರರಾಗಲಿದ್ದೀರಿ.

**ಸಿಂಹ**: ಹಿರಿಯರ ಜತೆ ವಿನಮ್ರವಾಗಿ ಇರಲೇಬೇಕು. ನಿಮ್ಮ ನಡವಳಿಕೆಯು ಸ್ವಲ್ಪ ಉದ್ಧಟತನವನ್ನು ಹೊಂದಬಹುದು. ಎಚ್ಚರದಿಂದ ಇದನ್ನು ಪರಿವರ್ತಿಸಿಕೊಳ್ಳಿ.

**ಕನ್ಯಾ**: ನಿಮ್ಮ ಅತೀ ಆಸ್ತಿಕ ಮನೋಭಾವವು ಬೇರೆಯವರಿಗೆ ಮೂಢನಂಬಿಕೆಯಂತೆ ಅನಿಸಬಹುದು. ಇದಕ್ಕೆ ನೀವು ತಲೆ ಕೆಡಿಸಿಕೊಳ್ಳುವುದು ಬೇಡ. ಸಹಜವಾದ ವರ್ತನೆ ಇರಲಿ. ಶುಭವಾಗಲಿದೆ.

**ತುಲಾ**: ಸಾಕು ಪ್ರಾಣಿಗಳ ಬಗ್ಗೆ ಎಲ್ಲಿಲ್ಲದ ಮಮಕಾರ ಹುಟ್ಟಿಕೊಳ್ಳಲಿದೆ. ಜತೆಗೆ ಈ ಮೂಲಕ ಸಂತೋಷವನ್ನು ಹೊಂದಲಿದ್ದೀರಿ. ಸಂಬಂಧಿಕರಲ್ಲಿ ಹಣಕಾಸಿನ ವ್ಯವಹಾರ ಬೇಡ, ನಷ್ಟಕ್ಕೆ ಕಾರಣವಾಗಲಿದೆ.

**ವೃಶ್ಚಿಕ**: ನಿಮ್ಮ ಅಭಿಮಾನಿ ವರ್ಗದವರು ಇಂದು ಹೆಚ್ಚಾಗಲಿದ್ದಾರೆ. ನಿಮ್ಮ ಮಾತು ಹೆಚ್ಚು ಪ್ರಭಾವದ ಶಕ್ತಿಯನ್ನು ಇಂದು ಹೊಂದಲಿದೆ. ಶುಭ ಕಾರ್ಯಕ್ಕೆ ನಿಮ್ಮ ಶಕ್ತಿ ಇಂದು ವಿನಿಯೋಗವಾಗಲಿದೆ.

**ಧನು**: ಪರೋಪಕಾರದ ಮನಸ್ಸು ಇಂದು ಜಾಗ್ರತವಾಗಿ ಬಿಡುವ, ಈ ಮೂಲಕ ಒಂದಿಷ್ಟು ಜನೋಪಯೋಗಿ ಕಾರ್ಯಗಳು ನಿಮ್ಮಿಂದ ಇಂದು ಆಗಲಿದೆ. ಮಕ್ಕಳ ವಿದ್ಯಾಭ್ಯಾಸ ಪ್ರಗತಿಯನ್ನು ಕಾಣಲಿದೆ.

**ಮಕರ**: ಮಂಗಳ ಕಾರ್ಯಕ್ಕೆ ಇಂದು ನಿಮ್ಮ ಉತ್ಸಾಹ ಇಮ್ಮಡಿಯಾಗಲಿದೆ. ಕುಟುಂಬದಲ್ಲಿ ನೆನಗುದಿಗೆ ಬಿದ್ದ ಕಾರ್ಯವನ್ನು ಕೈಗೆತ್ತಿಕೊಳ್ಳಿ. ಸುಗಮವಾಗಿ ಕಾರ್ಯ ನೆರವೇರಲಿದೆ.

**ಕುಂಭ**: ಮಿತ್ರರ ಸಹಾಯದಿಂದ ಮಹತ್ತರ ಕಾರ್ಯಕ್ಕೆ ಕೈ ಹಾಕಿಕೊಳ್ಳುವ ಸಂದರ್ಭ ಬರಲಿದೆ. ಇದು ಶುಭ ಪರಿಣಾಮವನ್ನು ಉಂಟು ಮಾಡಲಿದೆ. ಮಿತ್ರರ ಜತೆಗೂಡಿ ಪ್ರವಾಸ ಯೋಗದ ಭಾಗ್ಯವಿದೆ.

**ಮೀನ**: ಹಳೆಯ ನೆನಪಿನಲ್ಲಿ ದಿನ ಕಳೆಯುವುದು ಬೇಡ. ಆಲಸ್ಯವನ್ನು ಬಿಟ್ಟು ಕಾರ್ಯದ ಬಗ್ಗೆ ಪ್ರವೃತ್ತರಾಗಿ ಯಶಸ್ಸು ಸುಲಭದಲ್ಲಿ ದೊರಕಲಿದೆ. ಕೌಟುಂಬಿಕ ಕ್ಷೇತ್ರದಲ್ಲಿ ಸುಖ-ಶಾಂತಿಯೂ ದೊರಕಲಿದೆ.

### 50 ಸಾವಿರ ರು.ಮುಂಗಡಕ್ಕೆ ಫ್ಲ್ಯಾಟ್ | ಷರತ್ತು ಸಡಿಲಿಸಲು ಸರಕಾರ ಚಿಂತನೆ

# ಬಡವರ ಕೈಗೆಟುಕಲಿವೆ ಗೃಹಮಂಡಳಿ ಫ್ಲ್ಯಾಟ್

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ನಗರದಲ್ಲಿ ಸ್ವಂತ ಮನೆ ಖರೀದಿಸಬೇಕೆ? ಹಾಗಾದರೆ ಕೇವಲ 50 ಸಾವಿರ ರುಪಾಯಿ ಹಣ ಹೊಂದಿಸಿಕೊಳ್ಳಿ!

ಆಶ್ಚರ್ಯ ಬೇಡ. ಕೇವಲ 50 ಸಾವಿರ ರುಪಾಯಿ ಮುಂಗಡ ನೀಡಿ ಹೌಸಿಂಗ್‌ಬೋರ್ಡ್ ನಿರ್ಮಾಣ ಮಾಡಿರುವ ಫ್ಲ್ಯಾಟ್‌ಅನ್ನು ನಿಮ್ಮದಾಗಿಸಿಕೊಳ್ಳಬಹುದು. ಸಾರ್ವಜನಿಕರಿಗೆ ನೆರವಾಗುವ ದೃಷ್ಟಿಯಿಂದ ರಾಜ್ಯ ಸರಕಾರ ಇಂಥದ್ದೊಂದು ಯೋಜನೆಯನ್ನು ಸದ್ಯದಲ್ಲೇ ಜಾರಿಗೆ ತರಲಿದೆ. ಹಾಗಂತ, ಮುಂಗಡ ಕೊಟ್ಟು ಫ್ಲ್ಯಾಟ್ ಖರೀದಿಸುವ ಪ್ರಕ್ರಿಯೆ ಈಗಾಗಲೇ ಜಾರಿಯಲ್ಲಿಲ್ಲರಲಿಲ್ಲ ಎಂದರ್ಥವಲ್ಲ. ಈ ಯೋಜನೆ ಈಗಾಗಲೇ ಜಾರಿಯಲ್ಲಿತ್ತು. ಆದರೆ, ಫ್ಲ್ಯಾಟ್ ಖರೀದಿಸುವ ಸಾರ್ವಜನಿಕರಿಗೆ ಹತ್ತಾರು ಬಗೆಯ ಷರತ್ತುಗಳನ್ನು ವಿಧಿಸಲಾಗಿತ್ತು. ಅಲ್ಲದೇ, ಫ್ಲ್ಯಾಟ್‌ನ ಬೆಲೆಯ ಶೇ.10 ರಿಂದ 20 ರಷ್ಟು ಹಣ ಮುಂಗಡವಾಗಿ ಪಾವತಿ ಮಾಡಬೇಕಿತ್ತು.

ಕಠಿಣ ಷರತ್ತುಗಳಿಂದಾಗಿ ಹೌಸಿಂಗ್ ಬೋರ್ಡ್‌ನ ಫ್ಲ್ಯಾಟ್‌ಗಳನ್ನು ಖರೀದಿಸಲು ಸಾರ್ವಜನಿಕರು ಹಿಂದೇಟು ಹಾಕಿದ್ದರು. ಇದರಿಂದ ನೂರಾರು ಫ್ಲ್ಯಾಟ್‌ಗಳು ಮಾರಾಟವಾಗದೇ ಉಳಿದುಕೊಂಡಿವೆ. ಈ ಹಿನ್ನೆಲೆಯಲ್ಲಿ ಷರತ್ತನ್ನು ಸಡಿಲಗೊಳಿಸಲು ರಾಜ್ಯ ಸರಕಾರ ಗಂಭೀರ ಚಿಂತನೆ ನಡೆಸಿದೆ.

ಸಾಂದರ್ಭಿಕ ಚಿತ್ರ.


ಕರ್ನಾಟಕ ವಸತಿ ನಿಗಮದಿಂದ ರಾಜಧಾನಿ ಬೆಂಗಳೂರಿನಲ್ಲಿ ನಿರ್ಮಿಸಿರುವ ಫ್ಲ್ಯಾಟ್‌ಗಳ ಖರೀದಿಗಿದ್ದ ನಿಮಯಗಳನ್ನು ಸಡಿಲಗೊಳಿಸಲಾಗಿದೆ ಎಂದು ಮಂಗಳವಾರ ವಸತಿ ಸಚಿವ ಯು.ಟಿ.ಖಾದರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಹಿಂದೆ ಬೆಂಗಳೂರು ಭಾಗದಲ್ಲಿ ಮನೆಗಳ ಖರೀದಿಗೆ ಅನೇಕ ಷರತ್ತುಗಳನ್ನು ವಿಧಿಸಲಾಗಿತ್ತು. ಇದರಿಂದ ಅನೇಕರು ಹೌಸಿಂಗ್ ಬೋರ್ಡ್ ಫ್ಲ್ಯಾಟ್‌ಗಳತ್ತ ಗಮನ ಹರಿಸಿರಲಿಲ್ಲ. ಆದ್ದರಿಂದ ಸಾರ್ವಜನಿಕರಿಗೆ ಸಹಾಯವಾಗಲಿ ಎನ್ನುವ ಉದ್ದೇಶದಿಂದ ನಿಮಯ ಸಡಿಲಗೊಳಿಸಲಾಗಿದ್ದು, ಕೇವಲ 50 ಸಾವಿರ ಠೇವಣಿ ಹಣವಿಟ್ಟರೆ ಸ್ಥಳದಲ್ಲಿಯೇ ಫ್ಲ್ಯಾಟ್‌ಗಳನ್ನು ಹಂಚಿಕೆ ಮಾಡಲಾಗುವುದು ಎಂದರು.

ಹಲವು ಷರತ್ತುಗಳನ್ನು ವಿಧಿಸುವುದರಿಂದ ಸಾರ್ವಜನಿಕರಿಗೆ ಸಮಸ್ಯೆಯಾಗುತ್ತಿತ್ತು. ಖಾಸಗಿ ಅವರೊಂದಿಗೆ ಸ್ಪರ್ಧಿಸಬೇಕಾದರೆ ಷರತ್ತುಗಳನ್ನು ಸರಳಗೊಳಿಸುವುದರೊಂದಿಗೆ ಉತ್ತಮ ಸೌಲಭ್ಯ ಒದಗಿಸಬೇಕಿದೆ. ಆದ್ದರಿಂದ ಬೆಂಗಳೂರಿನ ಎರಡು ಸ್ಥಳಗಳಲ್ಲಿ ಮಾರಾಟವಾಗದೇ ಉಳಿದಿರುವ ಹೌಸಿಂಗ್ ಬೋರ್ಡ್ ಫ್ಲ್ಯಾಟ್‌ಗಳನ್ನು ಮಾರಾಟ ಮಾಡಲು ನಿಯಮ ಸಡಿಲಿಸಲಾಗಿದೆ ಎಂದು ಹೇಳಿದರು.

### 14 ಅಂತಸ್ತಿನ ಕಟ್ಟಡ

ರಾಜಧಾನಿ ಬೆಂಗಳೂರಿನಲ್ಲಿ ಜಾಗದ ಸಮಸ್ಯೆಯಿರುವುದನ್ನು ಗಮನದಲ್ಲಿರಿಸಿಕೊಂಡು, ವಸತಿ ಮಂಡಳಿ ನಿರ್ಮಿಸುವ ಕಟ್ಟಡಗಳನ್ನು ಖಾಸಗಿ ಫ್ಲ್ಯಾಟ್‌ಗಳ ರೀತಿ ಕಟ್ಟಲು ನಿರ್ಧರಿಸಲಾಗಿದೆ. ಈ ಹಿಂದೆ ಕೇವಲ ನಾಲ್ಕು ಅಂತಸ್ತಿನ ಕಟ್ಟಡ ನಿರ್ಮಿಸಲಾಗುತ್ತಿತ್ತು. ಮುಂದಿನ ದಿನದಲ್ಲಿ ಇದನ್ನು 13-14 ಅಂತಸ್ತಿಗೆ ಏರಿಸಲು ಚಿಂತನೆ ನಡೆಸಲಾಗಿದೆ. ಇದರಿಂದ ಹೆಚ್ಚಿನ ಜನರಿಗೆ ಮನೆಗಳು ದೊರೆಯಲಿವೆ ಎಂದು ವಿಶ್ವಾಸವ್ಯಕ್ತಪಡಿಸಿದರು.

### ಹಿಂದಿನ ನಿಯಮಗಳೇನು?

- ಐದು ವರ್ಷ ಅದೇ ಸ್ಥಳದಲ್ಲಿ ವಾಸವಿರಬೇಕು
- 90 ಸಾವಿರ ಮುಂಗಡ ಹಣ ಪಾವತಿಸಬೇಕು
- ಆದಾಯ ಮಿತಿ ಹೇರಲಾಗಿತ್ತು

### ಗ್ರಾಹಕರು ಹಿಂದೇಟು ಹಾಕಲು ಕಾರಣವೇನು?

- ಸೂಕ್ತ ನಿರ್ವಹಣಾ ಕೊರತೆ
- ಫ್ಲ್ಯಾಟ್‌ಗಳಲ್ಲಿ ಇಂಟೀರಿಯ್ ಸಮಸ್ಯೆ
- ಒಮ್ಮೆ ಖರೀದಿಸಿದ ಬಳಿಕ, ಮಂಡಳಿ ವತಿಯಿಂದ ಯಾವುದೇ ನಿರ್ವಹಣೆಯಿರುವುದಿಲ್ಲ

### ನಿವಾಸಗಳ ದರವೆಷ್ಟು?

| | |
|---|---|
| ಸಿಂಗಲ್ ಬಿಎಚ್‌ಕೆ : | ₹ 18-20 ಲಕ್ಷ |
| ಡಬಲ್ ಬಿಎಚ್‌ಕೆ : | ₹ 20-25 ಲಕ್ಷ |

## ಕಸಾಯಿಖಾನೆಗಳ ವಿವರ ಕೊಡಿ: ಬಿಬಿಎಂಪಿಗೆ ಹೈ ತಾಕೀತು

**ಹೈಕೋರ್ಟ್ ಸುದ್ದಿಗಳು**

**ಬೆಂಗಳೂರು:** ನಗರ ವ್ಯಾಪ್ತಿಯಲ್ಲಿ ಅಕ್ರಮವಾಗಿ ಕಾರ್ಯ ನಿರ್ವಹಿಸುತ್ತಿರುವ ಕಸಾಯಿ ಖಾನೆಗಳ ವಿರುದ್ಧ ಕೈಗೊಂಡಿರುವ ಕ್ರಮಗಳ ಕುರಿತು ವರದಿ ಸಲ್ಲಿಸುವಂತೆ ಬಿಬಿಎಂಪಿ ಹಾಗೂ ನಗರ ಪೊಲೀಸ್ ಆಯುಕ್ತರಿಗೆ ಹೈಕೋರ್ಟ್ ಮಂಗಳವಾರ ನಿರ್ದೇಶಿಸಿದೆ.

ನ್ಯಾಯಾಲಯದ ಆದೇಶದ ಹೊರತಾಗಿಯೂ ಅಕ್ರಮ ಕಸಾಯಿ ಖಾನೆಗಳ ವಿರುದ್ಧ ಪೊಲೀಸರು ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ ಗೋಗ್ಯಾನ್ ಫೌಂಡೇಶನ್ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾ. ರಾಘವೇಂದ್ರ ಎಸ್.ಚೌಹಾಣ್ ಅವರಿದ್ದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ಅಕ್ರಮ ಕಸಾಯಿಖಾನೆಗಳನ್ನು ನಿಯಂತ್ರಿಸಲು ಸೂಕ್ತ ಕ್ರಮಗಳನ್ನು ಜಾರಿಗೊಳಿಸದ ಸರಕಾರದ ಕ್ರಮಕ್ಕೆ ಅಸಮಧಾನ ವ್ಯಕ್ತಪಡಿಸಿದ ಪೀಠ, ಗೋ ವಧೆ ತಡೆಗಾಗಿ ಬಿಬಿಎಂಪಿ 2015ರಲ್ಲಿ ರಚಿಸಿರುವ ತಪಾಸಣಾ ದಳ ಇದುವರೆಗೂ ಕೈಗೊಂಡಿರುವ ಕ್ರಮಗಳೇನು? ನಗರದಲ್ಲಿ ಪರವಾನಗಿ ಹೊಂದಿರುವ ಹಾಗೂ ಇಲ್ಲದಿರುವ ಕಸಾಯಿಖಾನೆಗಳೆಷ್ಟು? ನಿಯಮ ಉಲ್ಲಂಘಿಸಿರುವವರ ವಿರುದ್ಧ ದಾಖಲಿಸಿರುವ ಪ್ರಕರಣಗಳೆಷ್ಟು? ತಪ್ಪಿತಸ್ಥರಿಂದ ವಸೂಲಿ ಮಾಡಿರುವ ದಂಡವೆಷ್ಟು ಎಂಬುದರ ಕುರಿತು ವರದಿಯನ್ನು ಜೂ.29ರೊಳಗೆ ಸಲ್ಲಿಸುವಂತೆ ಬಿಬಿಎಂಪಿ ಆಯುಕ್ತರಿಗೆ ಸೂಚಿಸಿದ ಪೀಠ, ವಿಚಾರಣೆಯನ್ನು ಮುಂದಕ್ಕೆ ಹಾಕಿತು.

## ರತ್ನಪ್ರಭಾ ವಿರುದ್ಧ ಎಸಿಬಿಗೆ ದೂರು

**ಬೆಂಗಳೂರು:** ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ರತ್ನಪ್ರಭಾ ಅವರ ವಿರುದ್ಧ ಅಧಿಕಾರ ದುರ್ಬಳಕೆ ಆರೋಪದ ಮೇಲೆ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ)ಯಕ್ಕೆ ದೂರು ನೀಡಲಾಗಿದೆ.

ಉದ್ಯೋಗ ಮತ್ತು ತರಬೇತಿ ಇಲಾಖೆ ಮಾಜಿ ನೌಕರ ಶಂಕರ ದೇವೇಗೌಡ ಎಂಬುವರು ಈ ದೂರು ನೀಡಿದ್ದಾರೆ. ಉದ್ಯೋಗ ಮತ್ತು ತರಬೇತಿ ಇಲಾಖೆಯ 62 ಜನರಿಗೆ ಹಿಂಬಡ್ತಿ ನೀಡಿ ಸುಪ್ರೀಂ ಕೋರ್ಟ್ ಆದೇಶಿಸಿದೆ.

ಆದರೂ ಮುಖ್ಯ ಕಾರ್ಯದರ್ಶಿ ರತ್ನಪ್ರಭಾ ಅವರು ಸುಪ್ರೀಂಕೋರ್ಟ್ ತೀರ್ಪಿಗೆ ವ್ಯತಿರಿಕ್ತವಾಗಿ ಸುಪ್ರೀಂ ಆದೇಶ ಜಾರಿಯಾಗದಂತೆ ಮಾಡಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ರತ್ನಪ್ರಭಾ ಅವರು ಇಲಾಖಾ ಕಾರ್ಯದರ್ಶಿಗೆ ಒತ್ತಡ ಹೇರಿದ್ದಾರೆ. ಸುಪ್ರೀಂ ಆದೇಶ ಜಾರಿಯಾಗದಂತೆ ಕೊನೆಯ ಕ್ಷಣದಲ್ಲಿ ತಡೆಹಿಡಿದು ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ದೂರು ಸ್ವೀಕರಿಸಿರುವ ಎಸಿಬಿ ಅಧಿಕಾರಿಗಳು, ಕಾನೂನು ಸಲಹೆ ಪಡೆದ ನಂತರ ಪ್ರಕರಣದ ತನಿಖೆ ಬಗ್ಗೆ ನಿರ್ಧರಿಸಲಾಗುವುದು ಎಂದು ತಿಳಿಸಿದ್ದಾರೆ.



ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಅವರು ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಶುಭಾಶಯ ಕೋರಿದರು.

## ಭಾರತೀಯರು ಸಂಸ್ಕೃತಿಯ ಶ್ರೀಮಂತಿಕೆ ಅರಿತಿಲ್ಲ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಬ್ರಿಟಿಷ್ ಸಂಸತ್ತಿನಲ್ಲಿ ಭಾರತದ ಶಿಕ್ಷಣ ಪದ್ಧತಿ ಹಾಗೂ ಸಂಸ್ಕೃತಿ ಗಟ್ಟಿಯಾಗಿದೆ ಎಂದು ಹೇಳಿದರೂ, ನಮ್ಮ ದೇಶದಲ್ಲಿ ಮಾತ್ರ ಇಂಗ್ಲಿಷ್‌ಗೆ ಮಾರುಹೋಗುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮನು ಬಳಿಗಾರ್ ಬೇಸರ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ಪುಂಡಲೀಕ ಕಲ್ಲಿಗನೂರು ಅವರ 'ಶಿಲ್ಪಕಲಾ ದೇಗುಲಗಳು' ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತದ ಕಲಾ ಸಂಸ್ಕೃತಿ ಹಾಗೂ ಶಿಲ್ಪಕಲೆ ಪೋಷಿಸುವ ಮನಸ್ಥಿತಿ ಭಾರತೀಯರಲಿಲ್ಲ. ವಿದೇಶಗಳಲ್ಲಿ ಸಣ್ಣ ಪ್ರಾಚೀನ ದೇವಸ್ಥಾನ ಅಥವಾ ಪ್ರೇಕ್ಷಣೀಯ ಸ್ಥಳವಿದ್ದರೂ ಅದನ್ನು ವಿಶ್ವಕ್ಕೆ ಪರಿಚಯಿಸುತ್ತಾರೆ. ಆದರೆ, ನಮ್ಮಲ್ಲಿ ಆ ಪದ್ಧತಿ ಬೆಳೆದಿಲ್ಲ. ಹೀಗಾಗಿ ನಮ್ಮ ದೇಶ ಸಾಂಸ್ಕೃತಿಕವಾಗಿ ಶ್ರೀಮಂತವಾಗಿದ್ದರೂ ವಿಶ್ವಕ್ಕೆ ಪರಿಚಿತವಾಗಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು.

ಕೇಂದ್ರ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಚಿ.ಸು. ಕೃಷ್ಣಸೆಟ್ಟಿ ಮಾತನಾಡಿ, ಛಾಯಾಚಿತ್ರಗಳು ನಮಗೆ ಕಲಾಕೃತಿಯ ದೇಹವನ್ನು ಮಾತ್ರ ವರ್ಣರಂಜಿತವಾಗಿ ದರ್ಶನ ಮಾಡಿಸುತ್ತವೆ. ಆದರೆ, ಇದೇ ವೇಳೆ ಕಲಾಕೃತಿಯ ಆತ್ಮವನ್ನು ಮರೆ ಮಾಡುವ ಮೂಲಕ ಆಂತರಿಕ ಸೌಂದರ್ಯಕ್ಕೆ ಹಾನಿಯನ್ನುಂಟು ಮಾಡುತ್ತವೆ ಎಂದರು.

ಛಾಯಾಗ್ರಹಣ ಕ್ಷೇತ್ರ ಹೆಮ್ಮರವಾಗಿ ಬೆಳೆದ ಪರಿಣಾಮ ಯಾವುದೇ ಒಂದು ಕಲಾಕೃತಿಯ ಛಾಯಾಚಿತ್ರವನ್ನು ಕ್ಷಣಾರ್ಧದಲ್ಲಿ ಕಣ್ತುಂಬಿಕೊಳ್ಳಬಹುದು. ಆದರೆ, ಈ ಛಾಯಾಚಿತ್ರ ಸತ್ಯವನ್ನು ಮರೆಮಾಚಿ, ಭ್ರಮೆಯ ಜಗತ್ತನ್ನು ನಿರ್ಮಾಣ ಮಾಡುತ್ತಿದೆ. ಹೀಗಾಗಿ ಕೇವಲ ಬಾಹ್ಯ ಸೌಂದರ್ಯ ಮಾತ್ರ ನಮ್ಮ ನೋಟಕ್ಕೆ ಸಿಲುಕಿ, ಆಂತರಿಕ ಸೌಂದರ್ಯ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವ ಸಾಧ್ಯತೆ ಎದುರಾಗಿದೆ. ಅಷ್ಟೇ ಅಲ್ಲ, ಕಲಾಕೃತಿ ಐತಿಹಾಸಿಕ ಮಹತ್ವವನ್ನು ಕಳೆದುಕೊಳ್ಳುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಅಷ್ಟಕ್ಕೂ ಛಾಯಾಚಿತ್ರಗಳು ಪ್ರಸ್ತುತ ಸನ್ನಿವೇಶದಲ್ಲಿ ಚಿತ್ರಹಿಂಸೆ ನೀಡುತ್ತಿವೆ ಎಂದು ಕೃಷ್ಣಸೆಟ್ಟಿ ಬೇಸರ ವ್ಯಕ್ತಪಡಿಸಿದರು.

ಕವಿ ಡಾ. ಸುಕನ್ಯಾ ಮಾರುತಿ, ಕಾವ್ಯಮಂಡಲ ನಿರ್ದೇಶಕ ಪ್ರೊ.ಎಲ್.ಎನ್.ಮುಕುಂದರಾಜ್, ಲೇಖಕ ಪುಂಡಲೀಕ ಕಲ್ಲಿಗನೂರ ಕಲೋಪಾಸಕ ಪ್ರೊ.ಬಿ.ಎ.ಕೆಂಚರೆಡ್ಡಿ ಇದ್ದರು.



ಪುಂಡಲೀಕ ಕಲ್ಲಿಗನೂರ ಅವರ 'ಶಿಲ್ಪಕಲಾ ದೇಗುಲಗಳು' ಕೃತಿಯನ್ನು ಕೇಂದ್ರ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಚಿ.ಸು. ಕೃಷ್ಣಸೆಟ್ಟಿ ಬಿಡುಗಡೆ ಮಾಡಿದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮನು ಬಳಿಗಾರ್, ಕನ್ನಡಪ್ರಭ ಪತ್ರಿಕೆ ಸಂಪಾದಕ ರವಿ ಹೆಗಡೆ, ಸಾಹಿತಿ ಡಾ.ಸುಕನ್ಯಾ ಮಾರುತಿ, ಕಾವ್ಯಮಂಡಲ ನಿರ್ದೇಶಕ ಪ್ರೊ.ಎಲ್.ಎನ್. ಮುಕುಂದರಾಜ್, ಲೇಖಕ ಪುಂಟಲೀಕ ಕಲ್ಲಿಗನೂರ, ಕಲೋಪಾಸಕ ಪ್ರೊ.ಬಿ.ಎ.ಕೆಂಚರೆಡ್ಡಿ ಇದ್ದರು.

> ಪಾಶ್ಚಿಮಾತ್ಯ, ಇಂಗ್ಲಿಷ್ ವ್ಯಾಮೋಹ, ಆಧುನಿಕತೆಯ ಮರುಳಿನಿಂದ ನಾವು ನಮ್ಮ ಕಲೆ ಪರಂಪರೆಯನ್ನು ಮರೆತಿದ್ದೇವೆ. ಪ್ರಾದೇಶಿಕ ಭಾಷೆಗಳನ್ನು ಕಳೆದುಕೊಳ್ಳುತ್ತಿದ್ದೇವೆ. ಹಿಂದಿ, ಸಂಸ್ಕೃತ ಭಾಷೆಗೆ ಯಾವುದೇ ಮಾನ್ಯತೆ ನೀಡುತ್ತಿಲ್ಲ. ಅದನ್ನು ಕಲಿಯುವುದರತ್ತ ಆಸಕ್ತಿ ವಹಿಸುತ್ತಿಲ್ಲ. ನಮ್ಮ ಕಲಾ ಸಂಸ್ಕೃತಿಯ ವೈಶಿಷ್ಟ್ಯತೆಯನ್ನು ಅರಿತುಕೊಂಡು ವರ್ತಿಸಬೇಕು.
>
> **-ಮನು ಬಳಿಗಾರ್**
> ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ

> ಭಾರತದಲ್ಲಿ ಅಗಾಧವಾದ ಸಾಂಸ್ಕೃತಿಕ ತಾಣಗಳಿವೆ. ಆದರೆ, ಅವುಗಳನ್ನು ಹೊರತರುವ ದಾಖಲೆಗಳು ನಮ್ಮಲ್ಲಿ ಕಡಿಮೆಯಾಗಿವೆ. ನಮ್ಮ ವೇದ ವಿಜ್ಞಾನಗಳಲ್ಲಿ ಹಲವು ವಿಚಾರಗಳಿವೆ. ಅವುಗಳನ್ನು ದಾಖಲಿಸುವ ಪ್ರಯತ್ನವನ್ನು ನಾವು ಮಾಡಿಲ್ಲ. ಭಾರತದಲ್ಲಿ ಸಾಕಷ್ಟು ಪುರಾತನ ವಿಚಾರಗಳಿವೆ. ಆದರೆ ಅವುಗಳಿಗೆ ನಾವು ನೀಡಿರುವ ಆದ್ಯತೆ ಕಡಿಮೆ ಎಂದು ಬೇಸರ ವ್ಯಕ್ತಪಡಿಸಿದರು.
>
> **-ರವಿ ಹೆಗಡೆ**
> ಕನ್ನಡಪ್ರಭ ಪತ್ರಿಕೆ ಸಂಪಾದಕರು

## ಪೆಟ್ರೋಲ್ ಬಂಕ್‌ಗೆ ನುಗ್ಗಿದ ಕೆಎಸ್‌ಆರ್‌ಟಿಸಿ ಬಸ್!

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಬ್ರೇಕ್ ವೈಫಲ್ಯಗೊಂಡ ಪರಿಣಾಮ ಕೆಎಸ್‌ಆರ್‌ಟಿಸಿ ಬಸ್ ಪೆಟ್ರೋಲ್ ಬಂಕ್ ಒಳಗೆ ನುಗ್ಗಿ ಆತಂಕ ಸೃಷ್ಟಿಸಿದ ಘಟನೆ ಗೊರಗುಂಟೆಪಾಳ್ಯದಲ್ಲಿ ಮಂಗಳವಾರ ನಡೆದಿದೆ. ಅದೃಷ್ಟವಶಾತ್ ಪ್ರಾಣಾಪಾಯ ಸಂಭವಿಸಿಲ್ಲ. ಘಟನೆ ಬಳಿಕ ಬಸ್ ಚಾಲಕ ಪುಟ್ಟರಾಜು ಸ್ಥಳದಿಂದ ಪರಾರಿಯಾಗಿದ್ದು, ಆತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಯಶವಂತಪುರ ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಬೆಳಗ್ಗೆ 7 ಗಂಟೆ ಸಮಯದಲ್ಲಿ ಹಾಸನದಿಂದ ನಗರಕ್ಕೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ 11.30ರ ವೇಳೆ ಗೊರಗುಂಟೆಪಾಳ್ಯ ಸಮೀಪ ಸಿಗ್ನಲ್ ದಾಟಿದ ಬಳಿಕ ಚಾಲಕನ ನಿಯಂತ್ರಣ ತಪ್ಪಿ ಏಕಾಏಕಿ ಎಡ ಭಾಗದಲ್ಲಿದ್ದ ಎಚ್‌ಪಿ ಪೆಟ್ರೋಲ್ ಬಂಕ್ ಒಳಗೆ ನುಗ್ಗಿದೆ. ಪರಿಣಾಮ ಪೆಟ್ರೋಲ್ ಬಂಕ್‌ನಲ್ಲಿ ಏರ್‌ವಿಂಡ್ ಪೈಪ್, ವೈರ್‌ಗಳು, ನಿಲುಗಡೆ ಮಾಡಿದ್ದ ಎರಡು ದ್ವಿಚಕ್ರ ವಾಹನಗಳು, ಅಗ್ನಿಶಾಮಕ ಉಪಕರಣಗಳು, ಹೂಕುಂಡಗಳು ಸೇರಿದಂತೆ ಇನ್ನಿತರ ವಸ್ತುಗಳು ಜಖಂಗೊಂಡಿವೆ.

ಆರ್‌ಎಂಸಿ ಪೊಲೀಸ್ ಠಾಣೆಯಲ್ಲಿ ಪೆಟ್ರೋಲ್ ಬಂಕ್ ಮಾಲೀಕರು ಎಫ್‌ಐಆರ್ ದಾಖಲಿಸಿದ್ದಾರೆ. ಈ ಅವಘಡದಿಂದ ಸುಮಾರು 15 ಲಕ್ಷ ರುಪಾಯಿಗೂ ಹೆಚ್ಚು ನಷ್ಟವಾಗಿದೆ. ಆ ನಷ್ಟವನ್ನು ಕೆಎಸ್‌ಆರ್‌ಟಿಸಿ ಕೊಡಬೇಕೆಂದು ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.




ಪೆಟ್ರೋಲ್ ಬಂಕ್ ಒಳಗೆ ನುಗ್ಗಿದ ಕೆಎಸ್‌ಆರ್‌ಟಿಸಿ ಬಸ್.



ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರ ನಾಲ್ಕು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಸರಕಾರದ ಸಾಧನೆ ವಿವರಿಸುವ ಪುಸ್ತಕವನ್ನು ಸರ್ವೋಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶ ಎಂ.ಎನ್. ವೆಂಕಟಾಚಲ ಅವರಿಗೆ ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ನೀಡಿದರು. ರಾಜ್ಯ ಸಹ ವಕ್ತಾರ ಎಸ್.ಪ್ರಕಾಶ್, ಮಾಜಿ ಉಪ ಮೇಯರ್ ಎಸ್.ಪ್ರಕಾಶ್, ನಗರ ಕಾರ್ಯದರ್ಶಿ ಗಣೇಶ್ ಇದ್ದರು.

## ಸಿಗ್ಮಾ ಕಂಪನಿ ವಿರುದ್ಧ ದೂರು

**ಬೆಂಗಳೂರು:** ಕಟ್ಟಡದಿಂದ ಹಾರಿ ಟೆಕ್ಕಿ ಭವೇಶ್ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಯುವಕನ ತಂದೆ ಮಹೇಂದ್ರ ಜೈಸ್ವಾನ್ ಸಿಗ್ಮಾ ಕಂಪೆನಿಯ ವಿರುದ್ಧ ವೈಟ್ ಫೀಲ್ಡ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ರೈಲ್ವೆ ಉದ್ಯೋಗಿಯಾಗಿರುವ ಮಹೇಂದ್ರ ಜೈಸ್ವಾನ್ ತಮ್ಮ ಮಗನಿಗೆ ಸಿಗ್ಮಾ ಕಂಪೆನಿಯವರು ಒತ್ತಡ ಮತ್ತು ಕಿರುಕುಳ ನೀಡುತ್ತಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಮೃತ ಭವೇಶ್ ಕಳೆದ ಕೆಲವು ದಿನಗಳ ಹಿಂದೆ ಕಂಪೆನಿಯ ಕೆಲಸದ ಒತ್ತಡದ ಬಗ್ಗೆ ತಂದೆ ಬಳಿ ಹೇಳಿಕೊಂಡಿದ್ದ. ಕಳೆದ ಒಂದು ವರ್ಷದ ಹಿಂದೆ ಮಧ್ಯಪ್ರದೇಶದಿಂದ ಬೆಂಗಳೂರಿಗೆ ಬಂದು ಕೆಲಸ ಮಾಡುತ್ತಿದ್ದ ಭವೇಶ್, ಸೋಮವಾರ ಸಂಜೆ ಕಂಪನಿಯ 12ನೇ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ವಿಶ್ವವಾಣಿ
ಪತ್ರಿಕೆ ಬರುತ್ತಿಲ್ಲವೇ?
ಆತ್ಮೀಯ ಓದುಗರೇ, ವಿಶ್ವವಾಣಿ ಪತ್ರಿಕೆಯ ಚಂದಾದಾರರಾಗಲು ಅಥವಾ ಪತ್ರಿಕೆಯ ಸರಬರಾಜಿನಲ್ಲಿ ಸಮಸ್ಯೆ ಇದ್ದಲ್ಲಿ ಕೂಡಲೇ ಸಂಪರ್ಕಿಸಿ
ಪ್ರಸರಣ ವಿಭಾಗ
9060402063
6362393933
circulation@vishwavani.news

## ಹಿಂದೂ ಸಂಘಟನೆ ಮೇಲೆ ಆರೋಪ: ಆಕ್ರೋಶ

**ಬೆಂಗಳೂರು:** ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ ಬಂಧಿತನಾಗಿರುವ ಕೆ.ಟಿ.ನವೀನ್ ಕುಮಾರ್‌ಗೆ ವಿಚಾರಣೆ ವೇಳೆ ಎಸ್‌ಐಟಿ ತಂಡ ಒತ್ತಡ ಹಾಕಿ ನನ್ನ ವಿರುದ್ಧ ಸುಳ್ಳು ಹೇಳಿಕೆ ಪಡೆದಿದ್ದಾರೆ ಎಂದು ಹಿಂದೂ ಜನಜಾಗೃತಿ ಸಮಿತಿ ರಾಜ್ಯ ವಕ್ತಾರ ಮೋಹನ್‌ಗೌಡ ಆರೋಪಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮದ್ದೂರಿನ ಹಿಂದೂ ಯುವ ಸೇನೆಯ ನವೀನ್ ಸೇರಿದಂತೆ ನಾಲ್ವರನ್ನು ಬಂಧಿಸಿದ್ದು, ವಿಚಾರಣೆಯಲ್ಲಿ ಪರೋಕ್ಷವಾಗಿ ಹಿಂದೂ ಜನಜಾಗೃತಿ ಸಮಿತಿಯ ಮಾನಹಾನಿ ಮಾಡಲು ಸಂಚು ರೂಪಿಸಲಾಗಿದೆ. ನವೀನ್‌ಕುಮಾರ್ ಆರೋಪದಂತೆ ನನ್ನ ಪಾತ್ರವಿದ್ದಲ್ಲಿ ಒಂದು ಷರತ್ತಿನ ಮೇರೆಗೆ ನಾರ್ಕೋ ಪರೀಕ್ಷೆಗೆ ಒಳಗಾಗಲು ಸಿದ್ದನಿದ್ದೇನೆ. ಹಿಂದುತ್ವವಾದಿ ರೋಹಿತ್ ಚಕ್ರತೀರ್ಥ ಅವರ ಹತ್ಯೆಗೆ ಸುಪಾರಿ ನೀಡಿದ್ದಾರೆ ಎಂಬ ಆರೋಪ ಎದುರಿಸುತ್ತಿರುವ ದಿನೇಶ್ ಅಮೀನ್ ಮಟ್ಟು ಅವರನ್ನೂ ನಾರ್ಕೋ ತನಿಖೆಗೆ ಒಳಪಡಿಸಬೇಕು ಎಂದು ತಿಳಿಸಿದರು.

ಶ್ರೀರಾಮ ಸೇನೆಯ ಸಂಸ್ಥಾಪಕ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಮಾತನಾಡಿ, ಹಿಂದೂ ಕಾರ್ಯಕರ್ತರ ಮೇಲೆ ಸಾಕ್ಷಿ ಇಲ್ಲದೇ ಆರೋಪ ಮಾಡುತ್ತಿದ್ದಾರೆ. ಹಿಂದುತ್ವ ಎಂಬುದು ರಾಷ್ಟ್ರೀಯತೆ. ಇದು ರಾಷ್ಟ್ರೀಯತೆ ಮೇಲೆ ಮಾಡುತ್ತಿರುವ ಆರೋಪವಾಗಿದೆ. ಪೊಲೀಸರಿಗೆ ಕಾಣದ ಕೈಗಳು ನಿಯಂತ್ರಣ ಮಾಡುತ್ತಿದೆ. ಕಾಂಗ್ರೆಸ್, ಕಮ್ಯೂನಿಸ್ಟ್‌ಗಳು ಹಿಂದೂ ಯುವಕರ ಮೇಲೆ ದಾಳಿ ಮಾಡುತ್ತಿದ್ದು, ಈ ಬಗ್ಗೆ ಯಾರೂ ಮಾತನಾಡುವುದಿಲ್ಲ. ಗೌರಿ ಹತ್ಯೆಗೆ ಸಂಬಂಧಿಸಿ ವಿಜಯಪುರದ ಸಿಂಧಗಿಯಲ್ಲಿ ಯುವಕರನ್ನು ಬಂಧಿಸಿದ್ದು, ಅವರು ಪ್ರಸ್ತುತ ಎಲ್ಲಿದ್ದಾರೆ ಎಂಬ ಸುಳಿವಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ಸುಪ್ರೀಂ ಕೋರ್ಟ್‌ನ ಎಲ್ಲ ಮಾರ್ಗದರ್ಶಿ ಸೂತ್ರಗಳನ್ನು ಪಾಲಿಸಲು ಪೊಲೀಸರು ವಿಫಲರಾಗಿದ್ದಾರೆ. ಗೌರಿ ಲಂಕೇಶ್ ಹತ್ಯೆ ಆರೋಪಿಗಳ ಸಂವಿಧಾನಾತ್ಮಕ ಹಕ್ಕುಗಳನ್ನು ಉಲ್ಲಂಘಿಸಲಾಗಿದ್ದು, ಆರೋಪಿಗಳಿಗೆ ಕಾನೂನು ನೆರವು ನಿರಾಕರಿಸಲಾಗಿದೆ ಎಂದರು.

## ಹಾಡಹಗಲೇ ಚಾಕು ತೋರಿಸಿ ವೃದ್ಧನ ಸುಲಿಗೆ

**ಬೆಂಗಳೂರು:** ಹಾಡಹಗಲೇ ಇಬ್ಬರು ಸುಲಿಗೆಕೋರರು ವ್ಯಕ್ತಿಯ ಕುತ್ತಿಗೆಗೆ ಚಾಕು ಹಿಡಿದು ಸುಮಾರು 15 ಸಾವಿರ ಹಣ ದೋಚಿರುವ ಘಟನೆ ಚಿಕ್ಕಪೇಟೆಯಲ್ಲಿ ನಡೆದಿದೆ. ಸೋಮವಾರ ಬೆಳಗ್ಗೆ 10 ಗಂಟೆಯ ವೇಳೆ ಈ ಘಟನೆ ನಡೆದಿದ್ದು, ಅಸಹಾಯಕ ವೃದ್ಧ ಹಣ ಕಳೆದುಕೊಂಡು ದಿಕ್ಕು ತೋಚದ ಸ್ಥಿತಿಯಲ್ಲಿದ್ದಾರೆ. ಸುಲಿಗೆಕೋರರು ಚಾಕು ತೋರಿಸಿ ಹಣ ಸುಲಿಗೆ ಮಾಡಿರುವ ದೃಶ್ಯಗಳು ಅಂಗಡಿಯೊಂದರ ಮುಂದಿರುವ ಸಿಸಿಟಿವಿಯಲ್ಲಿ ಸೆರೆಯಾಗಿವೆ.

**ವಿಡಿಯೊದಲ್ಲಿ ಏನಿದೆ?:** ತಮಿಳುನಾಡು ಮೂಲದ ವೃದ್ಧರೊಬ್ಬರು ಬೆಳಗ್ಗೆ ಚಿಕ್ಕಪೇಟೆಯ ಮೋಹನ್ ಕಾಂಪ್ಲೆಕ್ಸ್‌ಗೆ ಬಂದಿದ್ದಾರೆ. ಹಿಂದಿನಿಂದ ಬಂದ ಇಬ್ಬರು ಅವರನ್ನು ಹಿಡಿದುಕೊಂಡಿದ್ದಾರೆ. ಒಬ್ಬ ನೇರವಾಗಿ ಚಾಕುವನ್ನು ಕುತ್ತಿಗೆಗೆ ಹಿಡಿದಿದ್ದಾನೆ. ಮುಂದೆ ಬಂದ ಮತ್ತೊಬ್ಬ ವೃದ್ಧನ ಜೇಬಿನಲ್ಲಿದ್ದ ಸುಮಾರು 15 ಸಾವಿರ ಹಣ ತೆಗೆದುಕೊಂಡು ಪರಾರಿಯಾಗಿದ್ದಾರೆ. ಕೈಯಲ್ಲಿ ಚಾಕು ಹಿಡಿದಿದ್ದರಿಂದ ಭಯಬೀತರಾದ ವೃದ್ಧ ಪ್ರತಿರೋಧ ತೋರಲು ಸಾಧ್ಯವಾಗದೆ ಅಸಹಾಯಕ ಸ್ಥಿತಿಯಲ್ಲಿದ್ದರು.

## ಬಿಜೆಪಿ ಕಾರ್ಯಕರ್ತನ ಮೇಲೆ ಹಲ್ಲೆ

**ಅಪರಾಧ ಸುದ್ದಿಗಳು**

**ಬೆಂಗಳೂರು:** ರಾಜಕೀಯ ವೈಷಮ್ಯದ ಹಿನ್ನೆಲೆಯಲ್ಲಿ ಜಯನಗರದ ಶಾಕಾಂಬರಿ ವಾರ್ಡ್‌ನ ಬಿಜೆಪಿ ಕಾರ್ಯಕರ್ತ ಧೀರಜ್ ಎಂಬುವರ ಮೇಲೆ ದುಷ್ಕರ್ಮಿಗಳು ಹಲ್ಲೆ ನಡೆಸಿದ್ದಾರೆ. ಜಯನಗರ ಚುನಾವಣೆಯಲ್ಲಿ ಉಂಟಾದ ವೈಷಮ್ಯದ ಹಿನ್ನೆಲೆಯಲ್ಲಿ ಧೀರಜ್ ಮೇಲೆ ದುಷ್ಕರ್ಮಿಗಳ ತಂಡ ಹಲ್ಲೆ ಮಾಡಿರುವ ಶಂಕೆ ವ್ಯಕ್ತವಾಗಿದೆ. ಚುನಾವಣೆಗೂ ಮುನ್ನ ರಾಷ್ಟ್ರೀಯ ಪಕ್ಷವೊಂದರ ಕಾರ್ಯಕರ್ತರು ಧೀರಜ್‌ಗೆ ಬೆದರಿಕೆ ಹಾಕಿದ್ದು, ಅವರೇ ಹಲ್ಲೆ ಮಾಡಿದ್ದಾರೆ ಎನ್ನಲಾಗಿದೆ. ಗಾಯಗೊಂಡಿರುವ ಧೀರಜ್ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

## ಸಭೆ ಸಮಾರಂಭ

**ಡಾ. ಕೆ.ಸುಬ್ರಾಯ್ ಶರ್ಮರಿಂದ 'ದೇಹಲಾಭಃ' ಉಪನ್ಯಾಸ**
**ಆಯೋಜನೆ:** ಪರಮಾತ್ಮ ವಿಚಾರ ಟ್ರಸ್ಟ್
**ಸ್ಥಳ:** ಅಧ್ಯಾತ್ಮ ಮಂದಿರ, ನ್ಯಾಷನಲ್ ಹೈಸ್ಕೂಲ್ ರಸ್ತೆ, ವಿಶ್ವೇಶ್ವರಪುರ
**ಸಮಯ:** ಬೆಳಗ್ಗೆ 7.45ಕ್ಕೆ

**ಡಾ. ಕೆ.ಸುಬ್ರಾಯ್ ಶರ್ಮರಿಂದ 'ವಾಚಾರಂಭಣಂ' ಉಪನ್ಯಾಸ**
**ಆಯೋಜನೆ:** ವೇದಾಂತ ಸತ್ಸಂಗ ಕೇಂದ್ರ
**ಸ್ಥಳ:** ವೇದಾಂತ ನಿಲಯ, ಸಾಕಮ್ಮ ಗಾರ್ಡನ್ಸ್, ಬಸವನಗುಡಿ
**ಸಮಯ:** ಬೆಳಗ್ಗೆ 9ಕ್ಕೆ

**33 ಹಾಡುಗಳ ಭಜನೆ**
**ಆಯೋಜನೆ:** ಪೂರ್ಣಪ್ರಜ್ಞ ವಿದ್ಯಾಪೀಠ ಪ್ರತಿಷ್ಠಾನ
**ಸ್ಥಳ:** ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ, **ಸಮಯ:** ಬೆಳಗ್ಗೆ 9.30ಕ್ಕೆ

**ಅಂತಾರಾಷ್ಟ್ರೀಯ ಅಂತರ್ ಧಾರ್ಮಿಕ ಸಮ್ಮೇಳನ**
**ಆಯೋಜನೆ:** ನ್ಯಾಷನಲ್ ಅಸೆಂಬ್ಲಿ ಆಫ್ ರಿಲಿಜಿಯಸ್ ಬ್ರದರ್ಸ್ ಇಂಡಿಯಾ (ಎನ್‌ಎಆರ್‌ಬಿಐ)
**ಸ್ಥಳ:** ಎನ್‌ಎಆರ್‌ಬಿಐ ಸೆಕ್ರೆಟರಿಯೇಟ್, ಸಿಆರ್‌ಐ ಬ್ರದರ್ಸ್ ಸಂಸ್ಥೆ, ವಿದ್ಯಾ ದೀಪ್ ಕಾಲೇಜು ಕ್ಯಾಂಪಸ್, ಹಲಸೂರು
**ಸಮಯ:** ಬೆಳಗ್ಗೆ 9.30ಕ್ಕೆ

**'ಏಕಾಂತತೆಯಲ್ಲಿ ಅನುಕ್ರಮಗಳು' ಕಲಾಕೃತಿಗಳ ಪ್ರದರ್ಶನ**
**ಸ್ಥಳ:** 4ನೇ ಮುಖ್ಯ ರಸ್ತೆ, ಮಾಹುವಾ ಆರ್ಟ್ ಗ್ಯಾಲರಿ, ಸದಾಶಿವನಗರ,
**ಸಮಯ:** ಬೆಳಗ್ಗೆ 11ಕ್ಕೆ

**ಯುವ ಸಂಗೀತೋತ್ಸವ-2018**
**ಕೊಳಲು:** ವಿದ್ವಾನ್ ಶಶಾಂಕ್ ಜೋಡಿದಾರ್, ಪಿಟೀಲು: ವಿದ್ವಾನ್ ಪ್ರಣವ್ ಸ್ವರೂಪ್ ಬಿ.ಎನ್, ಮೃದಂಗ: ವಿದ್ವಾನ್ ವಿನೋದ್ ಶ್ಯಾಮ್ ಆನೂರ್
**ಆಯೋಜನೆ:** ಬೆಂಗಳೂರು ಗಾಯನ ಸಮಾಜ
**ಸ್ಥಳ:** ಕೃಷ್ಣರಾಜೇಂದ್ರ ರಸ್ತೆ, ಬೆಂಗಳೂರು ಗಾಯನ ಸಮಾಜ, **ಸಮಯ:** ಸಂಜೆ 6ಕ್ಕೆ

**ಉಪನ್ಯಾಸ**
**ಆಯೋಜನೆ:** ತಿರುಪತಿ ತಿರುಮಲ ದೇವಸ್ಥಾನ ಹಿಂದೂ ಧರ್ಮ ಪ್ರಚಾರ ಪರಿಷತ್
**ಸ್ಥಳ:** ವೆಂಕಟೇಶ್ವರಸ್ವಾಮಿ ದೇವಸ್ಥಾನ ಫಾಲಿಮಾರು ಮಠ, ಮಲ್ಲೇಶ್ವರ
**ಸಮಯ:** ಸಂಜೆ 6ಕ್ಕೆ

**ಶರಣ ಸಂಜೆ ಕಾರ್ಯಕ್ರಮ**
**ಅತಿಥಿ:** ಸರಸ್ವತಿ ಎಸ್.ಪಾಟೀಲ್, ಗಾಯಕ ರವೀಂದ್ರ ಜಕಾತಿ.
**ಆಯೋಜನೆ:** ಶ್ರೀ ವೀರಶೈವ ಸಂಗಮ
**ಸ್ಥಳ:** 7ನೇ ಹಂತ, ಪುಟ್ಟೇನಹಳ್ಳಿ, ಆರ್‌ಬಿಐ. ಬಡಾವಣೆ, ಸೋಮೇಶ್ವರ ಸಭಾಭವನ, ಜೆ.ಪಿ.ನಗರ
**ಸಮಯ:** ಸಂಜೆ 6.30ಕ್ಕೆ

**ಉಪನ್ಯಾಸ**
**ವಿಷಯ:** ಜೀವಂತ-ವೇದಾಂತ
**ಆಯೋಜನೆ:** ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್
**ಸ್ಥಳ:** ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ದೇವಸ್ಥಾನದ ಸಾಂಸ್ಕೃತಿಕ ಮಂದಿರ, 9ನೇ ಬಡಾವಣೆ, ಜಯನಗರ, **ಸಮಯ:** ಸಂಜೆ 6.30ಕ್ಕೆ

**ಪ್ರವಚನ**
**ವಿಷಯ:** ಶ್ರೀಮದ್ ಭಾಗವತ ಧರ್ಮಗಳು
**ಸ್ಥಳ:** ಗಂಗಾಧರ ಬಡಾವಣೆ, ವಿಜಯ ಮಧ್ವ ಸಂಘ, ವಿಜಯನಗರ
**ಸಮಯ:** ಸಂಜೆ 6.30ಕ್ಕೆ

**ಪ್ರವಚನ**
**ವಿಷಯ:** ಶ್ರೀಲಲಿತಾಸಹಸ್ರನಾಮ (ಸರಣಿ-15) ಕುರಿತು ಪ್ರವಚನ.
**ಸ್ಥಳ:** ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಡಿವಿಜಿ ಸಭಾಂಗಣ, ಬಸವನಗುಡಿ ರಸ್ತೆ
**ಸಮಯ:** ಸಂಜೆ 6.30ಕ್ಕೆ

**ಓದುಗರ ಗಮನಕ್ಕೆ:** ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮ, ಕೃತಿ ಬಿಡುಗಡೆ, ಕಲಾ ಪ್ರದರ್ಶನ ಮತ್ತು ಇತರೆ ಸಮಾಜಮುಖಿ ಕಾರ್ಯಕ್ರಮಗಳ ಮಾಹಿತಿ ಮತ್ತು ವಿವರವನ್ನು ಮುಂಚಿತವಾಗಿ ಪತ್ರಿಕೆಗೆ ಕಳುಹಿಸಿ ಕೊಡಬಹುದು. ನಿಮ್ಮ ಕಾರ್ಯಕ್ರಮ ವಿವರವನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. **ನಮ್ಮ ವಿಳಾಸ:** ವಿಶ್ವವಾಣಿ ದಿನಪತ್ರಿಕೆ, ಎರಡನೇ ಮತ್ತು ಮೂರನೇ ಮಹಡಿ, ಧನುಷ್ ಪ್ಲಾಜಾ, ಐಡಿಯಲ್ ಹೋಮ್ಸ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು- 560098, **ಇ-ಮೇಲ್ ವಿಳಾಸ:** vishvavaninews@gmail.com ಇಲ್ಲಿಗೆ ಕಳುಹಿಸಬಹುದು.